ಮೀಟಿಂಗ್‌ನ್ನು ಕರೆಯುತ್ತಾರೆ. ಈ ಖಾಲಿ ಇರತಕ್ಕಂಥ ಕ್ವಾರ್ಟರ್ಸ್‌ನ್ನು ಅಲಾಟ್‌ಮೆಂಟ್ ಮಾಡುತ್ತೇವೆ.

(ಊ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಬೆಂಚ್ ಕುರಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಬಹಳ ದಿವಸಗಳಿಂದ ನಾವು ಈ ಸದನದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮ ಗಮನಕ್ಕೆ ತಂದಿದ್ದೇವೆ. ಇವತ್ತು ತಾವು ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಸದನ ಇನ್ನು ಒಂದು ದಿವಸ ಅಥವಾ ಎರಡು ದಿವಸಗಳಲ್ಲಿ ಮುಗಿಯಬೇಕಾಗಿದೆ. ಇದು ಬಹಳ ಮಹತ್ವದ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರು ಸಹಿತ ಇದನ್ನು ಚರ್ಚೆಗೆ ಬಯಸಿದ್ದರು. ನಮಗೆ ಇಲ್ಲಿ ಅರ್ಥವಾಗದೇ ಇರತಕ್ಕಂಥಾದ್ದು ಏನೆಂದರೆ, ಇದರ ಬಗ್ಗೆ ಸರ್ಕಾರದ ಖಚಿತ ನಿಲುವು ಏನು? ಇದರ ಬಗ್ಗೆ ನಾವು ಇಲ್ಲಿ ಸದನದಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಸುಮಾರು ಎರಡು-ಮೂರು ತಿಂಗಳಿಂದ ಉತ್ತರ ಕರ್ನಾಟಕದ ವಕೀಲರುಗಳು ಹೈಕೋರ್ಟ್ ಬೆಂಚ್ ಬಗ್ಗೆ ಧರಣಿ ಸತ್ಯಾಗ್ರಹ, ಪ್ರತಿಭಟನೆ ಸಹಿತ ಮಾಡಿದ್ದಾರೆ. ಸರ್ಕ್ಯೂಟ್ ಬೆಂಚ್ ಮಾಡುತ್ತೇವೆ ಎನ್ನತಕ್ಕಂಥಾದ್ದನ್ನು ಸಹಿತ ತಾವು ಹೇಳಿದ್ದೀರಿ. ಈಗ ಹೊಸದಾಗಿ ಮುಖ್ಯ ನ್ಯಾಯಾಧೀಶರು ಕೂಡ ಬಂದಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದು ನಮಗೆ ಗೊತ್ತಾಗಬೇಕು. ಸರ್ವಪಕ್ಷಗಳ ನಿಯೋಗವನ್ನು ಸಹಿತ ತೆಗೆದುಕೊಂಡು ಹೋಗೋಣ ಎಂದು ಹೇಳಿದ್ದೀರಿ. ಈ ದೇಶದ ಪ್ರಧಾನಿಯವರನ್ನು ಸಹ ಭೇಟಿ ಮಾಡತಕ್ಕಂಥ ಮಾತನ್ನು ಕೂಡ ಹೇಳಿದ್ದೀರಿ. ಕೇಂದ್ರ ಸರ್ಕಾರದ ಕಾನೂನು ಸಚಿವರನ್ನು ಭೇಟಿ ಮಾಡತಕ್ಕಂಥ ವಿಚಾರವನ್ನು ಸಹಿತ ಹೇಳಿದ್ದೀರಿ. ಇಡೀ 16-17 ಜಿಲ್ಲೆಗಳ ಜನರು ಇವತ್ತು ಆ ಬಗ್ಗೆ ಬಹಳ ಕಾತರರಾಗಿದ್ದಾರೆ. ಕೇಂದ್ರ ಸರ್ಕಾರದವರು ಮೂರು-ನಾಲ್ಕು ಹೊಸ ರಾಜ್ಯಗಳನ್ನು ಸೃಷ್ಟಿಮಾಡಿ, ಹೊಸ ಹೈಕೋರ್ಟುಗಳನ್ನು ಮಾಡಿ, ಹೊಸ ರಾಜ್ಯಪಾಲರನ್ನು ಎಲ್ಲಾ ನೇಮಕ ಮಾಡಿದ್ದಾರೆ. ಕರ್ನಾಟಕ ರಾಜ್ಯದ ಜನ ಇಷ್ಟೊಂದು ಭಾರೀ ಪ್ರಮಾಣದಲ್ಲಿ ಪ್ರತಿಭಟನೆ ಮಾಡಿರತಕ್ಕಂಥ ಸಂದರ್ಭದಲ್ಲಿ ಸಹಿತ ಏನೋ ಡಾ: ರಾಜಕುಮಾರ್ ಪ್ರಕರಣ ಇತ್ತು, ಹಾಗಾಗಿ ಇದನ್ನು ಮುಂದೆ ಹಾಕಿಕೊಂಡು ಬಂದಿದ್ದೀರಿ. ಆದರೆ ಇದರ ಬಗ್ಗೆ ಸರ್ಕಾರದ ನಿಲುವು ಏನು? ಕರ್ನಾಟಕ ಹೈಕೋರ್ಟಿಗೆ ಹೊಸ ಮುಖ್ಯ ನ್ಯಾಯಾಧೀಶರು ಬಂದಿದ್ದಾರೆ. ಆ ಮುಖ್ಯ ನ್ಯಾಯಾಧೀಶರಿಗೆ ತಾವು ಪತ್ರವನ್ನು ಬರೆದಿದ್ದೀರಾ? ಈ ಎಲ್ಲಾ ವಿಚಾರಗಳನ್ನು ಸದನಕ್ಕೆ ತಿಳಿಸಬೇಕಾಗುತ್ತದೆ. ಏಕೆಂದರೆ ನಾವು ಪ್ರವಾಸಕ್ಕೆ ಹೋದಂಥ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಜನ ಸಹಿತ ಇದರ ಬಗ್ಗೆ ಬಹಳ ತೀವ್ರವಾದ ಆಕ್ರೋಶವನ್ನು ಇಟ್ಟುಕೊಂಡಿದ್ದಾರೆ. ಅಲ್ಲಿರತಕ್ಕಂಥ ಬಾರ್‌ಗಳು ಮತ್ತು ಇಲ್ಲಿ ಆಡಳಿತ ಪಕ್ಷದಲ್ಲಿರತಕ್ಕಂಥ ಮಂತ್ರಿಗಳು ಸಹಿತ ಒಬ್ಬೊಬ್ಬರು ಒಂದೊಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಬಾರ್ ಅಸೋಸಿಯೇಶನ್‌ನವರು ಅವರವರೇ

ತೀರ್ಮಾನ ಮಾಡಿ ಒಂದು ಒಂದೊಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಸರ್ಕಾರದ ಖಚಿತ ನಿಲುವು ಏನು ಎನ್ನತಕ್ಕದ್ದು ನಮಗೆ ಗೊತ್ತಾಗಬೇಕು. ತಾವು ಸರ್ವಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗುವುದಕ್ಕೆ ಆಗಿರತಕ್ಕಂಥ ತೊಂದರೆಯಾದರೂ ಏನು? ಮತ್ತೆ ಈಗ ಹೊಸದಾಗಿ ನೇಮಕವಾಗಿರತಕ್ಕಂಥ ಮುಖ್ಯನ್ಯಾಯಾಧೀಶರನ್ನು ವಿರೋಧಪಕ್ಷದ ನಾಯಕರು ಮತ್ತು ನಮ್ಮನ್ನೆಲ್ಲ ಕರೆದುಕೊಂಡು ಹೋಗಿ ಮಾತನಾಡತಕ್ಕಂಥಾದ್ದರ ಬಗ್ಗೆ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದರು. ಅದು ಸಹಿತ ಈಡೇರಿಲ್ಲ. ಇದಕ್ಕೆ ಕಾರಣ ಏನು ಎನ್ನತಕ್ಕದ್ದು ನಮಗೆ ಗೊತ್ತಾಗಬೇಕು. ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಸರ್ಕ್ಯೂಟ್ ಬೆಂಚ್ ಮಾಡುವುದಕ್ಕೆ ಯಾವುದೋ ಹಂತದಲ್ಲಿ ಅಲ್ಲಿರತಕ್ಕಂಥ ವಕೀಲರುಗಳು ಒಪ್ಪಿಗೆ ಕೊಟ್ಟಿರತಕ್ಕಂಥಾದ್ದು ಸಹಿತ ನಿಜ. ಅಲ್ಲಿ ಸರ್ಕ್ಯೂಟ್ ಬೆಂಚ್ ಮಾಡುವುದಕ್ಕೆ ನಿಮಗೆ ಏನು ತೊಂದರೆಯಾಗಿದೆ ಎನ್ನುವುದನ್ನು ಸ್ವತಃ ಕಾನೂನು ಪಂಡಿತರಾಗಿರತಕ್ಕಂಥ, ಕಾನೂನು ಸಚಿವರಾಗಿರತಕ್ಕಂಥ ಮಾನ್ಯ ಚಂದ್ರೇಗೌಡರು ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ನೀವು ಹೀಗೆ ಹೇಳುವುದು ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ಹೋರಾಟಗಾರರು, ಸಮಾಜವಾದದಲ್ಲಿ ನಡೆದುಕೊಂಡು ಬಂದಿರತಕ್ಕಂಥವರು ಎಂದು ಹೇಳದೆ ಬರೇ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಎಂದು ಹೇಳಿದರೆ ಹೇಗಿರುತ್ತದೆ? ನಾನು ಅವರು ಹೋರಾಟಗಾರರು, ಬಡವರಿಗೋಸ್ಕರ ಹೋರಾಟ ಮಾಡಿದರು, ಸಮಾಜವಾದಿ ಪಾರ್ಟಿಯಲ್ಲಿದ್ದರು, ನಮ್ಮ ಜತೆಯಲ್ಲಿದ್ದರು, ನಾವೆಲ್ಲರೂ ಒಟ್ಟಿಗೆ ಹೋರಾಟ ಮಾಡಿದಂಥವರು ಎಂದು ಹೇಳಿದರೆ, ಅದು ಬೇಡವೆಂದರೆ ಹೇಗೆ? ಮಾನ್ಯ ಚಂದ್ರೇಗೌಡರು ಸ್ವತಃ ಕಾನೂನು ಪಂಡಿತರು ಎಂದು ನಾನು ಹೇಳಿದೆ. ಅದಕ್ಕೆ ಏಕೆ ಕೋಪ ಮಾಡಿಕೊಳ್ಳಬೇಕು?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :— ಅವರು ಹೋರಾಟಗಾರರು ಎನ್ನುವುದರ ಬಗ್ಗೆ ಸರ್ಕಾರದ ನಿಲುವನ್ನು ಹೇಳಬೇಕಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಇಲ್ಲ, ನಾನು ಕೇಳಿಯೇ ಇಲ್ಲವಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಕಾನೂನು ಪಂಡಿತರು ಎಂದು ಅವರು ಏನು ಸಂಭೋದಿಸಿದರು, ಅದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿತ್ತಾ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ನನ್ನ ದೃಷ್ಟಿಯಲ್ಲಿ ಅವರು ಕಾನೂನು ಪಂಡಿತರು, ಅವರ ಬಗ್ಗೆ ನನಗೆ ಅಭಿಮಾನ ಇದೆ. ಇದರ ಬಗ್ಗೆ ಹೇಳಿ ಎಂದು ಅವರನ್ನು ನಾನು

ಕೇಳುತ್ತಿದ್ದೇನೆ. ಆದ್ದರಿಂದ ಸರ್ಕಾರದ ನಿಲುವು ಏನು ಎನ್ನುವುದು ನಮಗೆ ಗೊತ್ತಾಗಬೇಕು. ಈ ಬೇಡಿಕೆ ಬಗ್ಗೆ ಕೂಗು ಇನ್ನೂ ಮುಂದುವರೆಯುತ್ತಿದೆ. ಮತ್ತೆ ನಾವು ಇಲ್ಲಿ ವಿಧಾನಸಭೆಯನ್ನು ಮುಂದೂಡಿದರೆ, ಆಲ್ಲಿ ಮತ್ತೆ ಇನ್ನೊಂದು ಚಳುವಳಿ ಪ್ರಾರಂಭವಾಗಿ ಲಾ ಅಂಡ್ ಆರ್ಡರ್ ಬ್ರೇಕ್‌ಡೌನ್ ಆಗಿ ಸರ್ಕಾರ ಕೆಲಸ ಮಾಡಲಿಕ್ಕೆ ಸಾಧ್ಯವಾಗದಂಥ ಪರಿಸ್ಥಿತಿಯನ್ನು ನಾವು ನೋಡಬೇಕಾಗುತ್ತದೆ. ಡಾ: ರಾಜಕುಮಾರ್ ಅವರು ಕಾಡಿನಲ್ಲಿ ಇದ್ದದ್ದರಿಂದಾಗಿ ಅನೇಕ ವಿಚಾರಗಳನ್ನು ನಾವು ಮುಕ್ತವಾಗಿ ಚರ್ಚಿಮಾಡುವುದಕ್ಕೆ ಈ ಸದನದಲ್ಲಿ ಸಾಧ್ಯವಾಗದೇ ಇರುವುದು ನಮಗೆಲ್ಲರಿಗೂ ಗೊತ್ತಿದೆ. ಇದು ತಮಗೂ ಗೊತ್ತಿದೆ. ಆದ್ದರಿಂದ ಸರ್ಕಾರ ತನ್ನ ನಿಲುವು ಏನು ಎನ್ನುವುದನ್ನು ದಯವಿಟ್ಟು ತಿಳಿಸಬೇಕು ಮತ್ತು ಇದರ ಬಗ್ಗೆ ತೀವ್ರವಾಗಿ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಒತ್ತಾಯವನ್ನು ಸಹಿತ ನಾವು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಏನು ಪ್ರಸ್ತಾಪ ಮಾಡಿದರು, ಅದು ಬಿ.ಎ.ಸಿ. ಮೀಟಿಂಗ್‌ನಲ್ಲಿ ಕೂಡ ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದು ಚರ್ಚೆಗೆ ಬಂತು. ಅದಕ್ಕೆ ವಿಧಾನಸಭೆಯಲ್ಲಿ ಇದರ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತೇವೆ ಎಂದು ಹೇಳಿದರು. ಏಕೆಂದರೆ ಅಧಿವೇಶನ ನಾಳೆ, ನಾಡದ್ದು ಒಂದು ದಿವಸ ಮುಂದುವರೆಯಬಹುದು. ಇದು ಹೈಕೋರ್ಟ್ ಬೆಂಚ್ ಬಗ್ಗೆ ಇಡೀ ಉತ್ತರ ಕರ್ನಾಟಕದಲ್ಲಿ ಆರು ತಿಂಗಳ ಹಿಂದೆ ಸಾಕಷ್ಟು ದೊಡ್ಡ ಉಗ್ರರೂಪದ ಚಳುವಳಿ ನಡೆಯಿತು. ಹೀಗಾಗಿ ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟ ನಿಲುವು ಏನೆಂಬುದನ್ನು ಹೇಳಬೇಕು. ಯಾವಾಗಲೂ ಇಲ್ಲಿ ನಾವು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವುದರ ಪರವಾಗಿ ಇದ್ದೇವೆ ಎಂದು ಹೇಳುತ್ತೀರಿ. ಆದರೆ ಇದರ ಬಗ್ಗೆ ನಿಮ್ಮ ಪಾಸಿಟೀವ್ ಸ್ಟ್ಯಾಂಡ್ ಕ್ಲಿಯರ್ ಆಗುತ್ತಿಲ್ಲ. ಹಿಂದಿದ್ದ ಮುಖ್ಯ ನ್ಯಾಯಾಧೀಶರು ಕೊಟ್ಟಂಥ ವರದಿ, ಮತ್ತು ನ್ಯಾಯಾಧೀಶರಾದ ಅಶೋಕ್ ಭಾನು ಅವರ ನೇತೃತ್ವದಲ್ಲಿ ಇದ್ದಂಥ ಕಮಿಟಿ ರಿಪೋರ್ಟ್ ಕೊಟ್ಟಾದ ನಂತರ ಇದು ಸ್ವಲ್ಪ ಹಿನ್ನಡೆ ಆಯಿತು. ಈಗ ಮುಂದೆ ಏನು ಮಾಡುತ್ತೀರಿ ಎನ್ನುವಂಥಾದ್ದು ಪ್ರಶ್ನೆ ಇದೆ. ಈಗ ಹೊಸದಾಗಿ ಮುಖ್ಯ ನ್ಯಾಯಾಧೀಶರು ಹೈಕೋರ್ಟಿಗೆ ಬಂದಿದ್ದಾರೆ. ಅವರ ಜೊತೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕಾನೂನು ಸಚಿವರು ಸಮಾಲೋಚನೆ ಮಾಡಿಕೊಂಡು, ಬೇಕಾದರೆ ನಾವು ಪ್ರತಿಪಕ್ಷದ ನಾಯಕರು ಎಲ್ಲರೂ ಬರಬೇಕು ಎಂದರೆ ನಾವು ಬರುತ್ತೇವೆ. ಎಲ್ಲರೂ ಕೂಡಿಕೊಂಡು ಹೋಗೋಣ. ಇಲ್ಲಿರುವುದು ಸಾಮಾನ್ಯವಾದ ಉದ್ದೇಶ. ಇಡೀ ಉತ್ತರ ಕರ್ನಾಟಕದಲ್ಲಿರತಕ್ಕಂಥ ಎಲ್ಲ ಜನರ ಆಸೆ ಇದಾಗಿದೆ. ಇದರಲ್ಲಿ ಏನಾಗಿದೆ ಎಂದರೆ, ಉತ್ತರ ಕರ್ನಾಟಕದಲ್ಲಿ ಇದೊಂದು ಸೆಂಟಿಮೆಂಟ್ ಇಶ್ಯೂ ಆಗಿದೆ. ಇದಕ್ಕೆ ನೀವು ತಕ್ಷಣ ಸ್ಪಂದನ ಕೊಡಬೇಕಾಗಿದೆ. ಹಾಗೇ ಕೊಡದೇ ಇದ್ದುದಕ್ಕೆ ಹಲವಾರು

ತೊಂದರೆಗಳು ಉಂಟಾದವು. ಆಮೇಲೆ ರಾಜ್ಯ ಸರ್ಕಾರದವರು ಒಂದು ಘೋಷಣೆಯನ್ನು ಕೂಡ ಮಾಡಿದರು. ಅದು ಯಾವ ಹಂತದಲ್ಲಿ ಎಂದರೆ ಚಳುವಳಿ ಉಗ್ರರೂಪ ತಳೆದ ಸಂದರ್ಭದಲ್ಲಿ ರಾಜ್ಯಸರ್ಕಾರ ಒಂದು ಸ್ಟೇಟ್‌ಮೆಂಟ್ ಮಾಡಿತು. ನವೆಂಬರ್ 1 ರಿಂದ ಸರ್ಕ್ಯೂಟ್ ಬೆಂಚ್ ಮಾಡುತ್ತೇವೆ ಎನ್ನುವಂಥಾ ಘೋಷಣೆಯನ್ನು ತಾವು ಮಾಡಿದಿರಿ. ಮತ್ತು ಜಡ್ಜ್‌ನ್ನು ಪೋಸ್ಟಿಂಗ್ ಮಾಡುವ ಸಲುವಾಗಿ ತಾವು ಹೈಕೋರ್ಟಿಗೆ ಬರೆದಿರಿ. ಆಮೇಲೆ ಇಂಜಿನಿಯರುಗಳಿಗೆ ಕಟ್ಟಡ ನೋಡುವುದಕ್ಕೆ ಕಳಿಸಿ, ಅಧಿಕಾರಿಗಳನ್ನು ಕಳಿಸಿ ಸರ್ಕ್ಯುಟ್ ಬೆಂಚ್‌ನ್ನು ಸ್ಥಾಪಿಸಲು ಯಾವ ಕಟ್ಟಡವನ್ನು ಆಯ್ಕೆ ಮಾಡಬೇಕು ಎಂದು ಇದೆಲ್ಲ ಮಾಡಿದ್ದೀರಿ. ಆದರೆ ಮುಂದೆ ಏನು ತೊಂದರೆ ಆಯಿತು? ಏಕೆ ಇದು ಎಕ್ಸಿಕ್ಯೂಟ್ ಆಗಿಲ್ಲ ಎನ್ನುವುದು ಈಗಿರುವ ಪ್ರಶ್ನೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಕಾನೂನು ಸಚಿವರಲ್ಲಿ ಕೇಳುವುದು ಏನೆಂದರೆ ಈಗ ಹೊಸದಾಗಿ ಮುಖ್ಯ ನ್ಯಾಯಾಧೀಶರು ಏನು ಬಂದಿದ್ದಾರೆ ತಾವು ಇದರ ಬಗ್ಗೆ ಅವರನ್ನು ಭೇಟಿಯಾಗಬೇಕು ಮತ್ತು ಅವರಿಗೆ ಮನವರಿಕೆ ಮಾಡುವಂಥಾದ್ದು ಹಾಗೂ ಏನಾದರೂ ಇದರ ಬಗ್ಗೆ ಚಿಂತನೆ ಮಾಡುವಂಥಾದ್ದು ಆಗಬೇಕು. ತಕ್ಷಣ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ಈ ಹೈಕೋರ್ಟ್ ಬೆಂಚ್ ವಿಷಯದಲ್ಲಿ ವಾತಾವರಣ ಹೇಗಿದೆ ಎಂದರೆ ಬೂದಿ ಮುಚ್ಚಿದ ಕೆಂಡದ ಹಾಗೆ ಇದೆ. ವೀರಪ್ಪನ್ ಇಶ್ಯೂ ಆತ್ತು ಎಂದು ಇಲ್ಲಿಯವರೆಗೆ ಸ್ಟ್ಯಾಂಡ್‌ಸ್ಟಿಲ್ ಇತ್ತು. ಆದರೆ, ಮತ್ತೆ ಚಳುವಳಿಯಾಗುವಂಥಾದ್ದು, ಕ್ಷೋಭೆಯಾಗುವಂಥಾದ್ದು ಇವೆಲ್ಲಾ ಯಾವುದೇ ಹಂತದಲ್ಲಿ ಆಗಬಹುದು. ಅದಕ್ಕೆ ಈಗ ನಾರ್ಮಲ್ ಇದ್ದ ಸಂದರ್ಭದಲ್ಲಿ, ದಯವಿಟ್ಟು ತಾವು ಏನಾದರೂ ಕ್ರಮ ಕೈಗೊಂಡರೆ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಮಾನ್ಯ ಮುಖ್ಯನ್ಯಾಯಧೀಶರನ್ನು ಕರ್ನಾಟಕ ವಕೀಲರ ಒಕ್ಕೂಟದ ವತಿಯಿಂದ ನಾವು ಭೇಟಿ ಮಾಡಿದ್ದೆವು. ಅವರಲ್ಲಿ ನಾವು ಪರಿಶೀಲನೆ ಮಾಡಿದೆವು. ಇದಕ್ಕೆ ಒಂದು ಅವಕಾಶ ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಕಾನೂನು ಸಚಿವರು ಮತ್ತು ಮಾನ್ಯ ವಿರೋಧಪಕ್ಷಗಳ ನಾಯಕರೆಲ್ಲರೂ ಸೇರಿ, ಮತ್ತೆ ಮೀಟ್ ಮಾಡಿದರೆ ಬಹಳ ಒಳ್ಳೆಯದೆಂದು ನನ್ನ ಅನಿಸಿಕೆ.

ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಅಧ್ಯಕ್ಷರೇ, ನಾವು ಬಹಳ ಕಷ್ಟಪಟ್ಟು ಈ ರಾಜ್ಯವನ್ನು ಒಂದು ಮಾಡಿದ್ದೇವೆ. ಆದರೆ, ದುರ್ದೈವದಿಂದ ಪರಿಸ್ಥಿತಿ ಏನಾಗಿದೆ ಎಂದರೆ ಉತ್ತರ ಕರ್ನಾಟಕದ ಜನಗಳ ಮನಸ್ಸಿನಲ್ಲಿ ಏನು ಪರಿಣಾಮ ಬೀರಿದೆ ಎಂದರೆ, ಉತ್ತರ ಭಾರತದಲ್ಲಿ ಹೊಸದಾಗಿ ಎರಡು ಮೂರು ರಾಜ್ಯಗಳು, ಉತ್ತರಾಂಚಲ, ಛತ್ತೀಸ್‌ಘಡ್ ಜಾರ್ಖಂಡ್ ಎಂದು ಹೊಸ ರಾಜ್ಯಗಳಾಗಿವೆ. ಈ ರೀತಿ ಹೊಸ ರಾಜ್ಯವಾದ ಕೂಡಲೇ ಅಲ್ಲಿ ಹೈಕೋರ್ಟ್ ಆಗಿಬಿಡುತ್ತದೆ. ಹಾಗಾದರೆ ನಾವೂ ಏಕೆ ರಾಜ್ಯವನ್ನು ಒಡೆಯಬಾರದು

ಎಂಬ ಭಾವನೆ ಉತ್ತರ ಕರ್ನಾಟಕದ ಜನರಲ್ಲಿ ಬರುತ್ತಿದೆ. ಈ ದೃಷ್ಟಿಯಿಂದ ಆದಾಗದಹಾಗೆ ನಾವು ನೋಡಿಕೊಳ್ಳಬೇಕಾಗುತ್ತದೆ. ಜನಗಳ ಮನಸ್ಸನ್ನು ನಾವು ಕದಡಿಸಬಾರದು. ಅದಕ್ಕಾಗಿ ದಯವಿಟ್ಟು ನಮ್ಮ ನಾಯಕರುಗಳು ಹೇಳಿದಂತೆ, ಇನ್ನೊಮ್ಮೆ ನಾವೆಲ್ಲರೂ ಕೂಡ ಚೀಫ್ ಜಸ್ಟೀಸ್‌ರವರನ್ನು ಭೇಟಿ ಮಾಡೋಣ. ಕೊನೆಗೆ ಕೇಂದ್ರ ಸರ್ಕಾರದ ಮಟ್ಟಕ್ಕೆ ಹೋಗಿ, ತಿದ್ದುಪಡಿಯನ್ನಾದರೂ ತಂದು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಮಾಡಬೇಕೆಂಬ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) :— ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಹಾಗೆ ಕೆಲವು ವಿಚಾರಗಳನ್ನು ಹೇಳಬೇಕು. ಇದು ಅತಿ ಮುಖ್ಯವಾದ ಪ್ರಶ್ನೆ. ಮಾನ್ಯ ಪಿ.ಜಿ.ಆರ್. ಸಿಂಧ್ಯರವರಿಗೆ ಮತ್ತು ವಿರೋಧಪಕ್ಷದ ನಾಯಕರಿಗೆ ಎಷ್ಟು ಮುಖ್ಯವೋ ಅದಕ್ಕಿಂತಲೂ ಹೆಚ್ಚು ಮುಖ್ಯ ನಮಗೆ. ಏಕೆಂದರೆ, ನಾವು ಕಮಿಟ್ ಮಾಡಿಕೊಂಡಿದ್ದೇವೆ. ಅದಕ್ಕಾಗಿ ಹೆಚ್ಚು ಮುಖ್ಯ ಎಂದು ಹೇಳಿದೆ. ಅಲ್ಲಿ, ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕೆನ್ನತಕ್ಕಂಥಾದ್ದು ಸರ್ಕಾರದ ನಿರ್ಧಾರ ಮತ್ತು ನಿಲುವು. ಯಾವ ಕಾರಣಕ್ಕೂ ಅದರಲ್ಲಿ ಬದಲಾವಣೆ ಇಲ್ಲ. ಯಾರೂ ಇದರ ಮೇಲೆ ಅನ್ಯಥಾ ಭಾವಿಸುವುದು ಬೇಡ. ಆದರೆ, ನಾನೇಕೆ ಸುಬ್ಬಾರೆಡ್ಡಿಯವರ ವಿಚಾರ ಪ್ರಸ್ತಾಪ ಮಾಡಿದೆ ಎಂದರೆ, ನಾವು ಚರ್ಚೆ ಮಾಡುವ ಹಂತದಲ್ಲಿ ಸುಪ್ರೀಕೋರ್ಟಿಗೆ ಹೋಗಿ, ತೀರ್ಪು ತೆಗೆದುಕೊಂಡು ಬಿಟ್ಟಿದ್ದಾರೆ. ಆ ತೀರ್ಪು ನಮಗೆ ಈಗಿರತಕ್ಕ ಸಂಕಷ್ಟಗಳಿಗಿಂತ ಹೆಚ್ಚು ಬಾಧಕವಾಗಿರುತ್ತದೆ.

"ಉತ್ತರ ಕರ್ನಾಟಕದ ಜನರ ಆಶೋತ್ತರಗಳನ್ನು ಈಡೇರಿಸಲು ಹುಬ್ಬಳ್ಳಿ ಧಾರವಾಡದಲ್ಲಿ ಉಚ್ಚ ನ್ಯಾಯಾಲಯದ ಪೀಠವೊಂದನ್ನು ಸ್ಥಾಪಿಸಲು ದಿನಾಂಕ 5-11-1975 ರಿಂದ ಪ್ರಯತ್ನ ನಡೆಯುತ್ತಿದೆ. ಕರ್ನಾಟಕದ ಉಚ್ಚ ನ್ಯಾಯಾಲಯದ ಅಂದಿನ ಮುಖ್ಯ ನ್ಯಾಯಾಧೀಶರಾದ ಸನ್ಮಾನ್ಯ ಶ್ರೀ ಡಿ.ಎಂ. ಚಂದ್ರಶೇಖರಯ್ಯರವರು ಹುಬ್ಬಳ್ಳಿ-ಧಾರವಾಡದಲ್ಲಿ ಪೀಠ ಸ್ಥಾಪನೆ ಮಾಡಲು ಸಹಮತಿಸಿದರು. ಜಸ್ಟೀಸ್ ಜಸ್ವಂತ್‌ಸಿಂಗ್ ಆಯೋಗದ ವರದಿಯ ನಂತರ, ರಾಜ್ಯದ ಅಂದಿನ ಮುಖ್ಯಮಂತ್ರಿಗಳು ಕೇಂದ್ರದ ಕಾನೂನು ಸಚಿವರಿಗೆ ದಿನಾಂಕ 17-5-1988ರಲ್ಲಿ ಪತ್ರ ಬರೆದು ಹುಬ್ಬಳ್ಳಿ-ಧಾರವಾಡದಲ್ಲಿ ಖಾಯಂ ಪೀಠ ಸ್ಥಾಪನೆ ಮಾಡುವಂತೆ ಕೋರಿದರು. ರಾಜ್ಯದ ಎರಡೂ ಸದನಗಳು ದಿನಾಂಕ 30,31-3-92ರಲ್ಲಿ ಉತ್ತರ ಕರ್ನಾಟಕದಲ್ಲಿ ಖಾಯಂ ಪೀಠ ಸ್ಥಾಪಿಸುವ ಬಗ್ಗೆ ಒಮ್ಮತದ ನಿರ್ಣಯವನ್ನು ಕೈಗೊಂಡಿದ್ದಾರೆ. ಆ ನಿರ್ಣಯವನ್ನು ಮಾನ್ಯ ಮುಖ್ಯ ನ್ಯಾಯಾಧೀಶರಿಗೆ ಕಳುಹಿಸಿಕೊಡಲಾಗಿದೆ. ನಂತರ ಅವರು ರಾಜ್ಯಸರ್ಕಾರವು ಈ ಬಗ್ಗೆ ಯಾವ ಸ್ಥಳದಲ್ಲಿ ಪೀಠ ಸ್ಥಾಪಿಸಬೇಕು ಎಂದು ನಿರ್ಣಯಿಸುವಂತೆ ನ್ಯಾಯಾಲಯವು ಇಚ್ಛಿಸುತ್ತದೆಂದು" ತಿಳಿಸಿದರು. ದಿನಾಂಕ: 19-9-96ರಂದು ಅಂದಿನ ಮುಖ್ಯಮಂತ್ರಿಗಳು ಈ ಉದ್ದೇಶಕ್ಕೆ

ಹುಬ್ಬಳ್ಳಿ-ಧಾರವಾಡ ನಗರವು ಸಮರ್ಪಕವಾಗಿದೆಯೆಂದು ಮುಖ್ಯನ್ಯಾಯಾಧೀಶರಿಗೆ ತಿಳಿಸಿದರು. ಈ ವಿಷಯವನ್ನು ಪರಿಶೀಲಿಸಲು ಮಾನ್ಯ ಮುಖ್ಯ ನ್ಯಾಯಾಧೀಶರಿಂದ ರಚಿಸಲ್ಪಟ್ಟ ಐವರು ನ್ಯಾಯಾಧೀಶರುಗಳ ಸಮಿತಿಯು ಉಚ್ಚ ನ್ಯಾಯಾಲಯದ ಮೂಲಸ್ಥಾನದಿಂದ ಹೊರಗಡೆ ಮುಖ್ಯ ನ್ಯಾಯಾಲಯದ ಪೀಠವನ್ನು ಸ್ಥಾಪಿಸುವುದು ಅಪೇಕ್ಷಣೀಯವಲ್ಲ ಮತ್ತು ಸಾಧುವೂ ಅಲ್ಲವೆಂದು ನಿರ್ಣಯಿಸಿದೆ. ಮಾನ್ಯ ಮುಖ್ಯ ನ್ಯಾಯಧೀಶರೂ ಸಹ ದಿನಾಂಕ: 9-6-2000ಪತ್ರದ ಅನ್ವಯ ಸದರಿ ನಿರ್ಣಯಕ್ಕೆ ಸಮ್ಮತಿಸಿದೆ. ನಂತರ ರಾಜ್ಯ ಸಚಿವಸಂಪುಟವು 17-6-2000 ದಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ, ಉತ್ತರ ಕರ್ನಾಟಕದ ಜನತೆಗಾಗಿ ಉಚ್ಚ ನ್ಯಾಯಾಲಯದ ಪೀಠವೊಂದನ್ನು ಒದಗಿಸಲು, ತನ್ನ ಪ್ರಯತ್ನವನ್ನು ದ್ವಿಗುಣಗೊಳಿಸಲು ಮತ್ತು ರಾಜ್ಯಗಳ ಪುನರ್ ವಿಂಗಡಣೆ ಕಾಯಿದೆ 1956ರ ಕಲಂ 519(3)ರಲ್ಲಿ ಗೌರವಾನ್ವಿತ ರಾಜ್ಯಪಾಲರಿಗೆ ಮತ್ತು ಮುಖ್ಯ ನ್ಯಾಯಾಧೀಶರಿಗೆ ಪ್ರದತ್ತವಾದಂಥ ಅಧಿಕಾರದಂತೆ ಕನಿಷ್ಟ ಐವರು ನ್ಯಾಯಾಧೀಶರನ್ನು ಹುಬ್ಬಳ್ಳಿ-ಧಾರವಾಡದಲ್ಲಿ ಸರ್ಕೀಟ್ ಆಧಾರದ ಮೇಲೆ ಸಿಟ್ಟಿಂಗ್ ನಡೆಸಲು ಆದೇಶಿಸುವಂತೆ ಗೌರವಾನ್ವಿತ ರಾಜ್ಯಪಾಲರನ್ನು ಮತ್ತು ಮುಖ್ಯ ನ್ಯಾಯಾಧೀಶರನ್ನು ಕೋರಲು ಮತ್ತು ದಿನಾಂಕ: 1-11-2000ದಿಂದ ಸರ್ಕೀಟ್ ಬೆಂಚ್ ಅಲ್ಲಿ ನಿರ್ವಹಿಸುವಂತೆ ಮುಖ್ಯ ನ್ಯಾಯಾಧೀಶರನ್ನು ಕೋರಲು ನಿರ್ಣಯಿಸಲಾಯಿತು. ಅಂತೆಯೇ ಮಾನ್ಯ ಮುಖ್ಯಮಂತ್ರಿಗಳು, ಗೌರವಾನ್ವಿತ ರಾಜ್ಯಪಾಲರಿಗೆ ಮತ್ತು ಮಾನ್ಯ ಮುಖ್ಯ ನ್ಯಾಯಾಧೀಶರಿಗೆ ದಿನಾಂಕ 20-6-2000 ದಂದು ಪತ್ರ ಬರೆದಿದ್ದರು ಮತ್ತು 23-6-2000 ದಂದು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸರ್ವಪಕ್ಷಗಳ ನಿಯೋಗವು ದೆಹಲಿಗೆ ಹೋಗಿ ಪ್ರಧಾನ ಮಂತ್ರಿಗಳಿಗೆ ಈ ಬಗ್ಗೆ ಒಂದು ಮೆಮೋರ್ಯಾಂಡಂ ಕೂಡ ಸಲ್ಲಿಸಿದೆ. ಉಚ್ಚ ನ್ಯಾಯಾಲಯದ ಮುಖ್ಯ ಪೀಠದಿಂದ ಹೊರಗೆ ಪೀಠ ಸ್ಥಾಪಿಸುವ ಬಗ್ಗೆ ಇರುವ ತೊಡಕುಗಳನ್ನು ಮಾನ್ಯ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿ ಬಗೆಹರಿಸಿಕೊಳ್ಳುವಂತೆ ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯಾಂಗ ಹಾಗೂ ಕಂಪನಿ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ 29-6-2000ಪತ್ರದಲ್ಲಿ ಕೋರಿದ್ದಾರೆ. ನಂತರ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 1-7-2000ರ ಪತ್ರದಲ್ಲಿ ಹುಬ್ಬಳ್ಳಿ-ಧಾರವಾಡದಲ್ಲಿ ಖಾಯಂ ಪೀಠ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೇಂದ್ರ ಕಾನೂನು ಮತ್ತು ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಸಚಿವರನ್ನು ಮತ್ತು ಗೌರವಾನ್ವಿತ ರಾಜ್ಯಪಾಲರನ್ನು ಕೋರಿದ್ದಾರೆ. ಅನಂತರ ರಾಜ್ಯಪಾಲರು ದಿನಾಂಕ 5-7-2000ರ ತಮ್ಮ ಪತ್ರದಲ್ಲಿ, ಹುಬ್ಬಳ್ಳಿ-ಧಾರವಾಡದಲ್ಲಿ ಖಾಯಂ ಪೀಠಸ್ಥಾಪನೆ ಬಗ್ಗೆ ಸಚಿವ ಸಂಪುಟದ ಒಟ್ಟಭಿಪ್ರಾಯದ ನಿರ್ಣಯ ಮತ್ತು ಶಿಫಾರಸ್ಸುಗಳನ್ನು ಈಡಿಸಿಕೊಡುವಂತೆ ಕೋರಿದ್ದಾರೆ. ಈ ಮಧ್ಯೆ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ರಚಿಸಿದ್ದ ಸಮಿತಿಯು ತನ್ನ ವರದಿಯಲ್ಲಿ ಬೆಂಗಳೂರು ಹೊರಗೆ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪನೆ ಮಾಡುವುದು ಸಮರ್ಪಕವಲ್ಲವೆಂದು ತಿಳಿಸಿದ್ದರ ಹಿನ್ನೆಲೆಯಲ್ಲಿ ಸದರಿ ರಿಟ್ ಅರ್ಜಿಯನ್ನು ತಳ್ಳಿ ಹಾಕಿರುತ್ತದೆ. ಈ ಬಗ್ಗೆ ಸಚಿವ

ಸಂಪುಟವು 25-7-2000ದ ಸಭೆಯಲ್ಲಿ ಶ್ರೇಷ್ಠ ನ್ಯಾಯಾಲಯದ ತೀರ್ಪಿನ ಪರಿಣಾಮಗಳ ಬಗ್ಗೆ ಚರ್ಚಿಸಿ ಈ ವಿಷಯದ ಬಗ್ಗೆ ರಾಷ್ಟ್ರಪತಿಯವರ ಆದೇಶ ಪಡೆಯಲು, ತನ್ನ ಪ್ರಯತ್ನಗಳನ್ನು ಮುಂದುವರಿಸಲು ನಿರ್ಣಯಿಸಿತು. ಕರ್ನಾಟಕದ ಮುಖ್ಯ ನ್ಯಾಯಲಯದ ಮುಖ್ಯ ನ್ಯಾಯಾಧೀಶರು ಇತ್ತೀಚೆಗಷ್ಟೇ ತಮ್ಮ ಅಧಿಕಾರವನ್ನು ವಹಿಸಿಕೊಂಡಿದ್ದು ಕೇಂದ್ರ ಸರ್ಕಾರದ ಸಲಹೆಯಂತೆ ಸರ್ಕಾರವು ಈ ಬಗ್ಗೆ ಮತ್ತೊಮ್ಮೆ ಹೊಸದಾಗಿ ನೇಮಕಗೊಂಡಿರುವ ಮುಖ್ಯ ನ್ಯಾಯಾಧೀಶರೊಂದಿಗೆ ವ್ಯವಹರಿಸುತ್ತದೆ.

ತಾವು ಹೇಳಿದಹಾಗೆ ಹೊಸ ನ್ಯಾಯಧೀಶರು ಬಂದಿದ್ದಾರೆ. ಎಲ್ಲಾ ಒಟ್ಟಾಗಿ ಹೋಗಬೇಕೆಂದರೆ ಹೋಗೋಣ. ನಮಗೆ ಬಾಧಕವಾಗಿರುವುದು ನಮ್ಮ ಹಿರಿಯ ವಕೀಲರ ರಿಟ್ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದು ಸ್ವಲ್ಪ ತಾಪತ್ರಯಕ್ಕೆ ಸಿಕ್ಕಿಹಾಕಿಕೊಳ್ಳಲು ಕಾರಣವಾಯಿತು. ಆದ್ದರಿಂದ ಈ ವಿಚಾರದಲ್ಲಿ ನಾವು ಒಟ್ಟಾಗಿ ಏನು ನಿರ್ಣಯ ಮಾಡಿದ್ದೇವೆ, ಅದು ಸದನದ ನಿರ್ಣಯ, ಸರ್ಕಾರದ ನಿರ್ಣಯ, ಪ್ರತಿಪಕ್ಷಗಳ ನಿರ್ಣಯ ಎಲ್ಲರೂ ಒಟ್ಟಾಗಿ ಸೇರಿರುವುದರಿಂದ ಆ ವಿಚಾರದಲ್ಲಿ ತಾವು ಯಾವ ಸಲಹೆ ಮತ್ತು ಮಾರ್ಗದರ್ಶನ ಮಾಡುತ್ತೀರೋ ಆ ಸಲಹೆಯಂತೆ ಸರ್ಕಾರ ನಡೆಯುತ್ತದೆ.

ಅಧ್ಯಕ್ಷರು :— ಈಗ ಮಾನ್ಯ ಮುಖ್ಯಮಂತ್ರಿಗಳು ಡಾ: ರಾಜ್ ಕುಮಾರ್ ವಿಷಯದಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

5. ಮುಖ್ಯಮಂತ್ರಿಗಳ ಹೇಳಿಕೆ.

ವಿಷಯ: ಅಪಹೃತ ಡಾ: ರಾಜಕುಮಾರ್ ಬಿಡುಗಡೆ ಕುರಿತು.

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಡಾ: ರಾಜ್ ಕುಮಾರ್ ಅವರು ಸುರಕ್ಷಿತವಾಗಿ ಮತ್ತು ಆರೋಗ್ಯವಾಗಿ ಹಿಂತಿರುಗಿ ನಮ್ಮಲ್ಲಿಗೆ ಬಂದಿದ್ದಾರೆ. ಇದು ವೈಯಕ್ತಿಕವಾಗಿ ನನಗೆ ಮತ್ತು ರಾಜ್ಯದ ಎಲ್ಲಾ ಜನತೆಗೆ ಹರ್ಷ ತಂದಿದೆ. ಸರ್ಕಾರದ ಪರವಾಗಿ ನಿಮ್ಮೆಲ್ಲರ ಪರವಾಗಿ ಮತ್ತು ರಾಜ್ಯದ ಸಮಸ್ತ ಜನತೆಯ ಪರವಾಗಿ ಈ ಸಂದರ್ಭದಲ್ಲಿ ಡಾ: ರಾಜ್‌ಕುಮಾರ್ ಅವರ ಬಿಡುಗಡೆಯನ್ನು ಸಾಧ್ಯಗೊಳಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಲು ನಾನು ಇಲ್ಲಿ ನಿಂತಿದ್ದೇನೆ.

ಡಾ: ರಾಜ್‌ಕುಮಾರ್‌ರವರು ಕಾಡುಗಳ್ಳನ ಬಂಧಿಯಾಗಿದ್ದಾಗ ನಾನು ಮೌನವಾಗಿ ಬಹಳಷ್ಟು ಟೀಕೆಗಳನ್ನು ಸಹಿಸಿದ್ದೇನೆ. ಆದರೆ ಈ ವಿಚಾರವಾಗಿ ಈಗ ನಿರ್ಭೀತಿಯಿಂದ ಮಾತನಾಡಬಯಸುತ್ತೇನೆ.

ಡಾ: ರಾಜ್‌ಕುಮಾರ್ ಅವರು ಇಂತಹ ವೇದನೆ ಮತ್ತು ಚಿತ್ರಹಿಂಸೆಗೆ ಒಳಗಾಗಬಾರದಿತ್ತು. ರಾಜ್ಯ ಸರ್ಕಾರ ಡಾ: ರಾಜ್ ಅವರನ್ನು ತಮ್ಮ ಚಲನವಲನದ